ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/ 668/ನಿವೃತ್ತಿ/2023/ಸಿಆರ್3:2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:-25.10.2023.

ಸುತ್ತೋಲೆ

ವಿಷಯ: 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿ.ಎಡ್, ಚಿತ್ರಕಲಾ ಮತ್ತು ಕಾನೂನ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖಾ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿ.ಎಡ್ ಚಿತ್ರಕಲಾ ಮತ್ತು ಕಾನೂನು ಕಾಲೇಜುಗಳು ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಲ್ಲಿ , ಕರ್ನಾಟಕ ನಾಗರೀಕ ಸೇವಾ ನಿಯಮ ೯೬(2)ರ ಪ್ರಕಾರ ದಿನಾಂಕ 01.01.2024 ರಿಂದ 31.12.2024ನೇ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಮತ್ತು ಬೋಧಕೇತರ ನೌಕರರುಗಳ ಮಾಹಿತಿಗಳನ್ನು ಪ್ರತ್ಯೇಕವಾಗಿ, ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಿರುವ ನಮೂನೆಯಲ್ಲಿ MS Excel ತಂತ್ರಾಂಶದಲ್ಲಿ (ನುಡಿ 6.0)ರಲ್ಲಿ ನಮೂದಿಸಿ ಹಾರ್ಡ್ ಮತ್ತು ಸಾಫ್ಟ್ ಕಾಪಿಗಳನ್ನು ದಿನಾಂಕ:05.11.2023ರೊಳಗೆ ಕೇಂದ್ರ ಕಛೇರಿಗೆ ಸಲ್ಲಿಸುವಂತೆ ಪ್ರಾಂಶುಪಾಲರುಗಳು ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಸಾಫ್ಟ್ ಕಾಪಿಗಳನ್ನು dce.pension@gmail.com ವಿಳಾಸಕ್ಕೆ MS Excel ನಮೂನೆಯಲ್ಲಿ ರವಾನಿಸತಕ್ಕದ್ದು.

1. ನಿವೃತ್ತಿ ಹೊಂದಲಿರುವ ನೌಕರರುಗಳ ಜನ್ಮ ದಿನಾಂಕ ಹಾಗೂ ಮಾಹಿತಿಗಳನ್ನು ತಪ್ಪಾಗಿ ಕಳುಹಿಸಿ ಕೊಡುತ್ತಿರುವುದರಿಂದ ನೌಕರರ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ನೌಕರರ ಜನ್ಮ ದಿನಾಂಕ ಹಾಗೂ ಇತರೆ ಮಾಹಿತಿಗಳು ತಪ್ಪಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಕೂಲಂಕುಷವಾಗಿ ಪರಿಶೀಲಿಸಿ ನಿಖರವಾದ/ಸ್ಪಷ್ಟ ಮಾಹಿತಿ ಕಳುಹಿಸಲು ನಿರ್ದೇಶಿಸಿದೆ.
2. ನಿವೃತ್ತಿ ಹೊಂದುತ್ತಿರುವವರ ಜನ್ಮ ದಿನಾಂಕವನ್ನು ಸೇವಾಪುಸ್ತಕ ಅಥವಾ ಇತರೆ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಮಾಹಿತಿಗಳನ್ನು ಕಳುಹಿಸುವುದು. (S.S.L.C. Marks Card and Duty Report Copy) ಲಗತ್ತಿಸುವುದು.(ಒಂದು ವೇಳೆ ತಪ್ಪಾಗಿ ಮಾಹಿತಿಗಳನ್ನು ನೀಡಿದ್ದಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಮುಂದಿನ ಆಗುಹೋಗುಗಳಿಗೆ ಪೂರ್ಣ ಜವಾಬ್ದಾರರನ್ನಾಗಿ ಮಾಡಲಾಗುವುದು)
3. ಕಾಲೇಜಿನಲ್ಲಿ/ಕಛೇರಿಯಲ್ಲಿ ಯಾರು ನಿವೃತ್ತಿ ಹೊಂದದೆ ಇರುವ ಪಕ್ಷದಲ್ಲಿ ಕಳುಹಿಸಿರುವ ನಮೂನೆಯಲ್ಲಿ "ಶೂನ್ಯ ವರದಿ" ಎಂದು ನಮೂದಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಿದೆ.
4. ನಿಯೋಜನೆ ಮೇಲೆ ತೆರಳಿರುವವರ ವಿವರಗಳನ್ನು ಮೂಲ ಕಾಲೇಜಿನವರು ಮಾತ್ರ ಸಲ್ಲಿಸುವುದು ಹಾಗೂ ಯಾವ ಕಾಲೇಜಿಗೆ ನಿಯೋಜನೆ ಮೇಲೆ ತೆರಳಿರುತ್ತಾರೆ ಎಂದು ಷರಾ ವಿಭಾಗದಲ್ಲಿ ನಮೂದಿಸಬೇಕು.
5. ಪ್ರಾಂಶುಪಾಲರುಗಳ ಹಾಗೂ ಉಪನ್ಯಾಸಕರುಗಳ ಬೋಧನಾ ವಿಷಯವನ್ನು ಕಡ್ಡಾಯವಾಗಿ ನಮೂದಿಸಬೇಕು.

6. ನಿವೃತ್ತರಾಗುವ ಸಿಬ್ಬಂದಿಗಳು ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ/ನಿರ್ವಹಿಸುತ್ತಿರುವ ಕಾಲೇಜುಗಳ ಮತ್ತು ಅವಧಿ ಬಗ್ಗೆ ಮಾಹಿತಿ ನೀಡುವುದು.
7. ನಿವೃತ್ತರಾಗುವ ಸಿಬ್ಬಂದಿಗಳ ನಿವೃತ್ತಿ ದಿನಾಂಕದ ಜೇಷ್ಠತೆಯನ್ನು ಅನುಸರಿಸಿ ನಿವೃತ್ತಿ ದಿನಾಂಕ ನಮೂದಿಸಿರಬೇಕು. (Monthwise) ಹಾಗೂ ನಮೂನೆಯಲ್ಲಿ ಬೋಧಕರ ವಿವರಪಟ್ಟಿ ಹಾಗೂ ಬೋಧಕೇತರರ ವಿವರಪಟ್ಟಿಯನ್ನು (Separate List of Teaching & Non Teaching) ಪ್ರತ್ಯೇಕವಾಗಿ ಬೇರೆ-ಬೇರೆ ನಮೂನೆಗಳಲ್ಲಿ ನಮೂದಿಸಿ ಎರಡು ಪಟ್ಟಿಗಳನ್ನು ತಯಾರಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ. ಮುಂದುವರೆದು ದಿನಾಂಕಗಳನ್ನು 01.01.2024ರ ಮಾದರಿಯಲ್ಲೇ (ಉದಾ:ಚಿಹ್ನೆ:../ ಉಪಯೋಗಿಸಬಾರದು)ನಮೂದಿಸಬೇಕು.

ಅಡಕ: ನಮೂನೆ

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ:

1. ಎಲ್ಲಾ ಪ್ರಥಮ ದರ್ಜೆ ಮತ್ತು ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ - (ಅಗತ್ಯ ಕ್ರಮಕ್ಕಾಗಿ)
2. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ -ಮಾಹಿತಿ ಹಾಗೂ ಅಗತ್ಯ ಕ್ರಮಕಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4. ಹೆಚ್ಚುವರಿ ಪ್ರತಿ ಹಾಗೂ ಕಛೇರಿ ಪ್ರತಿ

Govt. Teaching

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ಬೋಧಕ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

ಕಾಲೇಜಿನ ಹೆಸರು:

| KGID NO. as per HRMS | Name | Designation | Subject Appointed for | Date of Birth | Date of Appointment | Incharge-Principal | Date of Retirement in 2024 | Remarks |
|---|---|---|---|---|---|---|---|---|
| ಕೆ.ಜಿ.ಐ.ಡಿ ಸಂಖ್ಯೆ | ಹೆಸರು | ಪದನಾಮ | ವಿಷಯ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ/ ನಿರ್ವಹಿಸುತ್ತಿರುವ ಕಾಲೇಜುಗಳು ಮತ್ತು ಅವಧಿ | 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 | | 7 | 8 |
| | | | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ.

ಪ್ರಾಂಶುಪಾಲರು

Govt. Non Teaching

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ಬೋದಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

ಕಾಲೇಜಿನ ಹೆಸರು :

| KGID NO. as per HRMS | Name | Designation | Date of Birth | Date of Appointment | Date of Retirement in 2024 | Remarks |
|---|---|---|---|---|---|---|
| ಕೆ.ಜಿ.ಐ.ಡಿ ಸಂಖ್ಯೆ | ಹೆಸರು | ಪದನಾಮ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2024ನೇ ಕ್ಯಾಲಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 | 7 |
| | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ.

ಪ್ರಾಂಶುಪಾಲರು

## ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/ 669/ನಿವೃತ್ತಿ/2023/ಸಿಆರ್3:2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:-30.10.2023.

### ಸುತ್ತೋಲೆ

ವಿಷಯ: 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ,ತಮ್ಮ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯ ವ್ಯಾಪ್ತಿಗೆ ಒಳಪಡುವ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜು, ಬಿ.ಎಡ್ ಚಿತ್ರಕಲಾ ಮತ್ತು ಕಾನೂನು ಕಾಲೇಜುಗಳಲ್ಲಿ ದಿನಾಂಕ 01.01.2024 ರಿಂದ 31.12.2024ನೇ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಮಾಹಿತಿಗಳನ್ನು ಪ್ರತ್ಯೇಕವಾಗಿ, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ MS Excel ತಂತ್ರಾಂಶದಲ್ಲಿ ನಮೂದಿಸಿ ದೃಢೀಕರಿಸಿ ಹಾರ್ಡ್ ಮತ್ತು ಸಾಫ್ಟ್ ಕಾಪಿಗಳನ್ನು ದಿನಾಂಕ:05.11.2023ರೊಳಗೆ ತುರ್ತಾಗಿ ಕಳುಹಿಸತಕ್ಕದ್ದು. ಸಾಫ್ಟ್ ಕಾಪಿಯನ್ನು dce.pension@gmail.com ವಿಳಾಸಕ್ಕೆ MS Excel ನಮೂನೆಯಲ್ಲಿ ರವಾನಿಸತಕ್ಕದ್ದು.

ಅಡಕ: ನಮೂನೆ

30/10
ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು.

ಇವರಿಗೆ:

1 ಎಲ್ಲಾ ಖಾಸಾಗಿ ಅನುದಾನಿತ ಪ್ರಥಮ ದರ್ಜೆ ಮತ್ತು ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ - (ಅಗತ್ಯ ಕ್ರಮಕ್ಕಾಗಿ)

2 ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ -ಮಾಹಿತಿ ಹಾಗೂ ಅಗತ್ಯ ಕ್ರಮಕಾಗಿ.

3 ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

4 ಹೆಚ್ಚುವರಿ ಪ್ರತಿ ಹಾಗೂ ಕಛೇರಿ ಪ್ರತಿ

ಖಾಸಾಗಿ ಅನುದಾನಿತ ಕಾಲೇಜು (ಬೋಧಕ)

ಕಾಲೇಜು ಶಿಕ್ಷಣ ಇಲಾಖೆ

ಖಾಸಾಗಿ ಅನುದಾನಿತ ಕಾಲೇಜುಗಳಲ್ಲಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ಬೋಧಕ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

ಕಾಲೇಜಿನ ಹೆಸರು:

| Name | Designation | Subject Appointed for | Date of Birth | Date of Appointment | Incharge-Principal | Date of Retirement in 2024 | Remarks |
|---|---|---|---|---|---|---|---|
| ಹೆಸರು | ಪದನಾಮ | ವಿಷಯ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ/ ನಿರ್ವಹಿಸುತ್ತಿರುವ ಕಾಲೇಜುಗಳು ಮತ್ತು ಅವಧಿ | 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 | 7 | 8 |
| | | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ.

ಪ್ರಾಂಶುಪಾಲರು

# ಕಾಲೇಜು ಶಿಕ್ಷಣ ಇಲಾಖೆ

## ಖಾಸಾಗಿ ಅನುದಾನಿತ ಕಾಲೇಜುಗಳಲ್ಲಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ಬೋದಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

ಕಾಲೇಜಿನ ಹೆಸರು :

| Name | Designation | Date of Birth | Date of Appointment | Date of Retirement in 2024 | Remarks |
|---|---|---|---|---|---|
| ಹೆಸರು | ಪದನಾಮ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2024ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋ ನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 |
| | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ.

ಪ್ರಾಂಶುಪಾಲರು